2453: (2679) ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ): ಮಾನ್ಯ ಶ್ರೀ ಅಂಜನ ಮೂರ್ತಿ (ಮಾನ್ಯ ವಸತಿ ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೊಳಚೆ ಪ್ರದೇಶಗಳು ಎಷ್ಟು ಅವು ಯಾವುವು ;

ಆ) ಮುಂದೆ ಕೊಳಚೆ ಪ್ರದೇಶದ ವ್ಯಾಪ್ತಿಗೆ ಸೇರಲಿರುವ ಪ್ರದೇಶಗಳು ಯಾವುವು ;

ಇ) ಈ ಪ್ರದೇಶಗಳನ್ನು ಯಾವಾಗ ಕೊಳಚೆ ಪ್ರದೇಶಗಳೆಂದು ಸರ್ಕಾರ ಅಧಿಕೃತವಾಗಿ ಘೋಷಿಸಿರುತ್ತದೆ.

ಈ) ಹಾಗಿದ್ದರೆ, ಅವುಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮವೇನೆ?

ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ) ಮಾನ್ಯ ಶ್ರೀ ಆಂಜನ ಮೂರ್ತಿ (ಮಾನ್ಯ ವಸತಿ ಸಚಿವರು)

ಅ) ಬಿಜಾಪುರ ಮತಕ್ಷೇತ್ರದಲ್ಲಿ ಒಟ್ಟು 55 ಕೊಳಚೆ ಪ್ರದೇಶಗಳನ್ನು ಗುರುತಿಸಿದ್ದು ಇದರಲ್ಲಿ ಮಂಡಳಿಯ ಕಾಯ್ದೆ ಪ್ರಕಾರ 23 ಕೊಳಚೆ ಪ್ರದೇಶಗಳನ್ನು ಘೋಷಣೆ ಮಾಡಲಾಗಿದೆ. ಪಟ್ಟಿ ಅನುಬಂಧ "ಅ" ನಲ್ಲಿ ಲಗತ್ತಿಸಿದೆ.

ಆ) ಘೋಷಣೆಯಾಗದಿರುವ / ಗುರುತಿಸಿರುವ 32 ಕೊಳಚೆ ಪ್ರದೇಶಗಳು ಬಿಜಾಪುರ ನಗರದಲ್ಲಿದ್ದು ಕೊಳಚೆ ಪ್ರದೇಶವೆಂದು ಘೋಷಿಸುವಲ್ಲಿ ಅವಶ್ಯವಿರುವ ಗಣ ಲಕ್ಷಣಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು. ಇವುಗಳ ಪಟ್ಟಿಯನ್ನು ಅನುಬಂಧ "ಅ" ನಲ್ಲಿ ಲಗತ್ತಿಸಿದೆ.

ಇ) ಬಿಜಾಪುರ ನಗರದಲ್ಲಿ ಇದುವರೆಗೂ ಅಧಿಕೃತವಾಗಿ 23 ಕೊಳಚೆ ಪ್ರದೇಶಗಳನ್ನು ಘೋಷಿಸಲಾಗಿದೆ.ಸ ವಿವರಗಳನ್ನು ಅನುಬಂಧ "ಅ" ನಲ್ಲಿ ಲಗತ್ತಿದಿದೆ.

ಈ) ಬಿಜಾಪುರ ನಗರದಲ್ಲಿ ನಿರ್ಮಲ ಜ್ಯೋತಿ ಯೋಜನೆಯ ಮೊದಲನೇ ಸಹಂತದಲ್ಲಿ 8 ಕೊಳಚೆ ಪ್ರದೇಶಗಲಲ್ಲಿ ಮೂಲಭೂತ ಸೌಕರ್ಯ ಕಾಮಗಾರಿಗಳನ್ನು (ರಸ್ತೆ, ನೆಲಹಾಸು, ಕಲ್ವರ್ಟಗಳು ಮತ್ತು ಚರಂಡಿ) ರೂ. 128.70 ಲಕ್ಷಗಳ ವೆಚ್ಚದಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿದೆ ಮಾಂಬೇ ಯೋಜನೆಯಡಿ ವಿವಿಧ ಕೊಳಚೆ ಪ್ರದೇಶಗಳಲ್ಲಿ ಒಟ್ಟು 703 ಮನೆಗಳನ್ನು ನಿರ್ಮಿಸಿ ಪೂರ್ಣಗೊಳಿಸಲಾಗಿ.

2455: (2681) ಶ್ರೀ ಅಪ್ಪಸಾಹೇಬ್ (ಅಪ್ಪು)ಮಲ್ಲಣ್ಣ ಪಟ್ಟಣ ಶೆಟ್ಟಿ (ಬಿಜಾಪುರ) ಮಾನ್ಯ ಶ್ರೀ ಅಂಜನ ಮೂರ್ತಿ (ವಸತಿ ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಗೆ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಮಂಜೂರಾದ ಮನೆಗಳು ಎಷ್ಟು. (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)